# ಕನ್ನಡ ಪೋಸ್ಟ್

ಸಂಪಾದಕ : ಮಂಜು ಬನವಾಸೆ

KANNADA POST

ಇದು ಸುದ್ದಿ ವಿಳಾಸ

ಕನ್ನಡ ದಿನಪತ್ರಿಕೆ

ಹಾಸನ | E-mail : kannadapostnews@gmail.com | / ಕನ್ನಡ post | Price: ₹1

Vol.No.02 | Issue. 224 | Pages. 2 | Date: 16-08-2026, SUNDAY | RNI NO: KARKAN/2024/89601 | Kannada Daily

ಸಂಪುಟ : 02 - ಸಂಚಿಕೆ : 224 - ಪುಟಗಳು : 2 | 16-08-2026 | ಭಾನುವಾರ | Ph: 8762954248 | ದರ : ₹1


## ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ, ಬಾಕಿ ಕಾಮಗಾರಿ ಮುಗಿಸಲು ಕ್ರಮ: ಕೆಎಂಶಿ

# ಶೀಘ್ರ ಜನಸೇವೆಗೆ ಸಮರ್ಪಣೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ನಗರದ ಗಂಧದಕೋಠಿ ಆವರಣದಲ್ಲಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಕಟ್ಟಡ ಮುಕ್ತಾಯ ಹಂತದಲ್ಲಿದ್ದು, ಬಾಕಿ ಕಾಮಗಾರಿಯನ್ನು ಶೀಘ್ರವೇ ಪೂರ್ಣಗೊಳಿಸಿ ಜನಸೇವೆಗೆ ಸಮರ್ಪಣೆ ಮಾಡಲಾಗುವುದು ಎಂದು ಅಬಕಾರಿ ಸಚಿವರೂ ಆದ ಜಿಲ್ಲಾ ಉಸ್ತುವಾರಿ ಸಚಿವ ಕೆ.ಎಂ.ಶಿವಲಿಂಗೇಗೌಡ ತಿಳಿಸಿದರು.

ನಗರದ ಜಿಲ್ಲಾ ಕ್ರೀಡಾಂಗಣದಲ್ಲಿಂದು ನಡೆದ 80ನೇ ಸ್ವಾತಂತ್ರ್ಯ ದಿನಾಚರಣೆಯಂದು ಧ್ವಜಾರೋಹಣ ನೆರವೇರಿಸಿ ಬಳಿಕ ಮಾತನಾಡಿದ ಅವರು, ಉಳಿಕೆ ಕಾಮಗಾರಿ ಮುಗಿಸಿ ಕಾರ್ಯಾರಂಭ ಮಾಡಲು ಅಗತ್ಯವಿರುವ ಅನುದಾನದ ಬಗ್ಗೆ ಸಿಎಂ ಅವರ ಗಮನಕ್ಕೆ ತಂದು ಶೀಘ್ರವೇ ಕಾಮಗಾರಿ ಮುಗಿಸಲು ಪ್ರಯತ್ನ ಮಾಡಲಾಗುವುದು ಎಂದರು. ಆದಷ್ಟು ಬೇಗ ಈ ಮೂಲಕ ರೋಗಿಗಳಿಗೆ ತುರ್ತು ಆರೋಗ್ಯ ಸೇವೆ ಒದಗಿಸಲು ಪ್ರಾಮಾಣಿ ಪ್ರಯತ್ನ ಮಾಡಲಾಗುವುದು ಎಂದು ಭರವಸೆ ನೀಡಿದರು.

ನಗರದ ಜಿಲ್ಲಾಡಳಿತ ಕಚೇರಿ ಸಂಕೀರ್ಣ ನಿರ್ಮಾಣದ ಮೊದಲನೇ ಹಂತದ ಕಾಮಗಾರಿಗಾಗಿ 10 ಕೋಟಿ ಮತ್ತು ಎರಡನೇ ಹಂತದ ಕಾಮಗಾರಿಗೆ 20 ಕೋಟಿಗೆ ಅನುಮೋದನೆಗೊಂಡಿದೆ. ಮತ್ತೆಷ್ಟು ಹಣ ಬೇಕು ಎಂಬ ಮಾಹಿತಿ ಪಡೆದು, ಆದಷ್ಟು ಬೇಗ ಸಿಎಂ ಭೇಟಿ ಮಾಡಿ ಚರ್ಚಿಸಿ ಉಳಿದ ಕಾಮಗಾರಿ ಮುಗಿಸಲು ಬೇಕಿರುವ ಅನುದಾನ ತಂದು, ಈ ವರ್ಷದೊಳಗೆ ಲೋಕಾರ್ಪಣೆ ಮಾಡುವ ಆಶಯ ವ್ಯಕ್ತಪಡಿಸಿದರು.

ಸರ್ಕಾರದ ಮಹಾತ್ವಾಕಾಂಕ್ಷೆಯ ಎತ್ತಿನಹೊಳೆ ಯೋಜನೆ ಕಾಮಗಾರಿಗೆ ಐದಳ್ಳಕಾವಲು ಮತ್ತು ನಾಯಕರಹಟ್ಟಿ ಬಳಿ ಕೊಂಚ ಅಡ್ಡಿಯಾಗಿದೆ. ಭೂಮಿಯ ಪರಿಹಾರಕ್ಕಾಗಿ ದಯಾ ಭೂಮಿ ಅಡಿಯಲ್ಲಿ 28 ಕೋಟಿ ರೂ. ಹಣ ಈಗಾಗಲೇ ಎಸ್ಎಲ್ಓ ಖಾತೆಗೆ ಜಮೆ ಆಗಿದೆ. ಕಾಮಗಾರಿ



### ಪಕ್ಷಾತೀತ ನಿಯೋಗ-ಹೋರಾಟಕ್ಕೂ ಸಿದ್ಧ

ಹಾಸನ ಜಿಲ್ಲೆಗೆ ಐಐಟಿ ತರಬೇಕು ಎಂಬುದು ಬಹು ವರ್ಷಗಳ ಹೋರಾಟ. ಇದಕ್ಕಾಗಿ ಹಿಂದೆಯೇ 1057.24 ಗುಂಟೆ ಭೂಮಿ ಭೂಸ್ವಾದೀನ ಮಾಡಿಕೊಳ್ಳಲಾಗಿದೆ. ಮಾಜಿ ಪ್ರಧಾನಿ ದೇವೇಗೌಡರು, ಅವರ ಪುತ್ರರೂ ಹೋರಾಟ ಮಾಡಿದ್ದರೂ ಸಾಧ್ಯವಾಗಿಲ್ಲ. ಭೂಮಿ ನೀಡಿದವರಿಗೆ ಸೂಕ್ತ ಪರಿಹಾರ ಸಿಕ್ಕಿಲ್ಲ. ಸಂಸದರೂ ಸದನದಲ್ಲಿ ಪ್ರಶ್ನೆ ಮಾಡಿದ್ದಾರೆ. ಈ ವಿಚಾರದಲ್ಲಿ ಕೇಂದ್ರ ಸರ್ಕಾರ ಮಲತಾಯಿ ಧೋರಣೆ ತೋರುವುದು ಬೇಡ. ಜಿಲ್ಲೆಯ ಒಳಿತಿಗಾಗಿ ರಾಜ್ಯ ಸರ್ಕಾರದ ಜೊತೆಗೆ ಜಿಲ್ಲೆಯಿಂದಲೂ ಪಕ್ಷಾತೀತವಾಗಿ ನಿಯೋಗ ಕರೆದೊಯ್ದು ಸಂಬಂಧಪಟ್ಟ ಸಚಿವರು ಮತ್ತು ಕೇಂದ್ರದ ಮೇಲೆ ಒತ್ತಡ ಹೇರಲಾಗುವುದು ಎಂದು ಸಚಿವರು ಭರವಸೆ ನೀಡಿದರು. ನಾವು ದ್ವೇಷ ಮಾಡಲ್ಲ, ಬಿಜೆಪಿ-ಜೆಡಿಎಸ್ ನವರು ಕರೆದರೂ ನಾವು ಹೋಗಲು ರೆಡಿ, ಐಐಟಿ ಜಿಲ್ಲೆಗೆ ಬೇಕೇ ಬೇಕು. ಇದಕ್ಕಾಗಿ ಪಕ್ಷಾತೀತ ಹೋರಾಟಕ್ಕೆ ವೇದಿಕೆ ರೂಪಿಸಲು ಸಿದ್ಧ ಎಂದರು.

ವಿಳಂಬದಿಂದ ಸುಮಾರು 400 ಕೋಟಿಯಷ್ಟು ಕರೆಂಟ್ ಬಿಲ್ ಕಟ್ಟಲಾಗಿದೆ. ಆದಷ್ಟು ಬೇಗ ವ್ಯಾಜ್ಯ ಬಗೆಹರಿಸಿ ಬೇಲೂರು ಮತ್ತು ಅರಸೀಕೆರೆ ಮೊದಲಾದ ತಾಲೂಕುಗಳ ಕೆರೆ-ಕಟ್ಟೆ ತುಂಬಿಸಿ, ಮುಂದಕ್ಕೂ ನೀರು ಕೊಂಡೊಯ್ಯಲು ಕ್ರಮವಹಿಸಲಾಗುವುದು ಎಂದು ತಿಳಿಸಿದರು.

ಹಾಗೆಯೇ ರಣಘಟ್ಟ ಕೆರೆ ತುಂಬಿಸುವ ಯೋಜನೆ, ಕಾಚೇನಹಳ್ಳಿ ಏತ ನೀರಾವರಿ 3ನೇ ಹಂತದ ಯೋಜನೆ, ರಂಗೇನಹಳ್ಳಿ ಏತ ನೀರಾವರಿ ಯೋಜನೆ ದುದ್ದ-ಶಾಂತಿಗ್ರಾಮ ಕೆರೆ ತುಂಬಿಸುವ ಯೋಜನೆ, ಹಿರೀಸಾವೆ ಹೋಬಳಿಯಲ್ಲಿ ಕೆರೆ ತುಂಬಿಸುವ ಯೋಜನೆಗಳು ಪ್ರಗತಿಯಲ್ಲಿದ್ದು, ಅವುಗಳನ್ನೂ ಶೀಘ್ರವೇ ಮುಗಿಸಲಾಗುವುದು ಎಂದು ಭರವಸೆ ನೀಡಿದರು.

ರಾಜ್ಯ ಸರ್ಕಾರದ ಪಂಚ ಗ್ಯಾರಂಟಿ ಯೋಜನೆಗಳಾದ ಅನ್ನಭಾಗ್ಯ ಯೋಜನೆ,

ಶಕ್ತಿ ಯೋಜನೆ, ಗೃಹಜ್ಯೋತಿ, ಗೃಹಲಕ್ಷ್ಮಿ ಹಾಗೂ ಯುವ ನಿಧಿ ಯೋಜನೆಗಳಿಂದ ಜಿಲ್ಲೆಯ ಲಕ್ಷಾಂತರ ಮಂದಿಗೆ ಸಾಕಷ್ಟು ಅನುಕೂಲವಾಗಿದೆ ಎಂದರು.

ಹಾಗೆಯೇ ನವಯುಗ-ನವ ಕರ್ನಾಟಕ ಯೋಜನೆ ಮೂಲಕ ಉತ್ತೇಜನ, ರೈತ ಮಿತ್ರ ಬಡವರ ಬಂಧು ಯೋಜನೆಯಡಿ ರೈತರಿಗೆ ಸಬ್ಸಿಡಿ, ನಮ್ಮ ಸರ್ಕಾರದ 6 ನೇ ಗ್ಯಾರೆಂಟಿ ಭೂ ಗ್ಯಾರೆಂಟಿ ಯೋಜನೆ ಮೂಲಕ ರಾಜ್ಯದ ಎಲ್ಲಾ ಕೃಷಿಯೇತರ ಸ್ವತ್ತುಗಳಿಗೆ ಇ-ಖಾತೆ ಸೇರಿದಂತೆ ಸಮಗ್ರ ಡಿಜಿಟಲ್ ಆರ್.ಟಿ.ಸಿ. ಮತ್ತು ಅರ್ಹ

ಬಿ-ಖಾತೆಗಳನ್ನು ಎ-ಖಾತೆಗಳಾಗಿ ಪರಿವರ್ತಿಸಿ ಭೂ ಮಾಲೀಕತ್ವದ ಹಕ್ಕುಗಳನ್ನು ಖಾತ್ರಿಪಡಿಸಿ ವ್ಯಾಜ್ಯಗಳನ್ನು ಕಡಿಮೆ ಮಾಡಲು ಕ್ರಮಕೈಗೊಳ್ಳಲಾಗುತ್ತಿದೆ ಎಂದರು.

ಕರ್ನಾಟಕ ನಶೆ ಮುಕ್ತ ರಾಜ್ಯವಾಗಿಸುವುದು, ಪ್ರಜಾಸೇವೆ ಇಲಾಖೆ ಸ್ಥಾಪಿಸಿ, ಸಾರ್ವಜನಿಕ ಕುಂದು ಕೊರತೆ ಆಲಿಸಲು, ಆಧುನಿಕ ತಂತ್ರಜ್ಞಾನದ ಮೂಲಕ ತ್ವರಿತ ಸ್ಪಂದನೆಗೆ ಕ್ರಮ ಕೈಗೊಳ್ಳಲು ಉದ್ದೇಶಿಸಲಾಗಿದೆ ಎಂದರು.

ಮುಖ್ಯವಾಗಿ ನಮ್ಮ ಜಿಲ್ಲೆಯಲ್ಲಿ ವಾಡಿಕೆಗಿಂತ ಶೇ.30 ರಷ್ಟು ಕಡಿಮೆ ಮಳೆಯಾಗಿದ್ದು,

ಮಳೆಯ ಕೊರತೆಯಿಂದ ಕೃಷಿ ಚಟುವಟಿಕೆಗೆ ಹಿನ್ನಡೆಯಾಗಿದೆ. ಈಗಾಗಲೇ ಜಿಲ್ಲಾಡಳಿತದ ಅಧಿಕಾರಿಗಳೊಂದಿಗೆ ಭೇಟಿ ನೀಡಿ ಬರ ಮತ್ತು ಕುಡಿಯುವ ನೀರಿನ ಪರಿಸ್ಥಿತಿ ಬಗ್ಗೆ ಎಲ್ಲಾ ತಾಲ್ಲೂಕುಗಳಲ್ಲಿ ವೀಕ್ಷಣೆ ಮಾಡಲಾಗಿದೆ. ಇದನ್ನು ಸರ್ಕಾರದ ಗಮನಕ್ಕೆ ತಂದು ಸೂಕ್ತ ಪರಿಹಾರ ಕೊಡಿಸಲು ಪ್ರಾಮಾಣಿಕ ಪ್ರಯತ್ನ ಮಾಡುವುದಾಗಿ ಹೇಳಿದರು.

ಜಿಲ್ಲೆಯಲ್ಲಿ ಮುಸುಕಿನ ಜೋಳಕ್ಕೆ ಆವರಿಸಿಕೊಂಡಿರುವ ಬಿಳಿಸುಳಿ ರೋಗ ಹಿನ್ನೆಲೆಯಲ್ಲಿ ಪರ್ಯಾಯ ಬೆಳೆ ಬೆಳೆಯಲು ಸಲಹೆ ನೀಡಲಾಗಿದೆ ಎಂದ ಅವರು ಕೃಷಿ ಮತ್ತು ತೋಟಗಾರಿಕೆ ಇಲಾಖೆಯ ವಿವಿಧ ಯೋಜನೆಗಳ ಅಡಿಯಲ್ಲಿ ನಷ್ಟ ಅನುಭವಿಸಿರುವ ರೈತರಿಗೆ ಸೂಕ್ತ ಪರಿಹಾರ ನೀಡಲಾಗಿದೆ ಎಂದು ತಿಳಿಸಿದರು.

## 80ನೇ ಸ್ವಾತಂತ್ರ್ಯ ದಿನಾಚರಣೆ ಅರ್ಥಪೂರ್ಣ ಆಚರಣೆ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹೊಳೆನರಸೀಪುರ : ತಾಲೂಕಿನ ಹಡವನಹಳ್ಳಿ ಅಗ್ರಹಾರ ಗೇಟ್‌ನಲ್ಲಿರುವ ಶ್ರೀರಂಗ ವಿದ್ಯಾಸಂಸ್ಥೆಯಲ್ಲಿ 80ನೇ ಸ್ವಾತಂತ್ರ್ಯ ದಿನಾಚರಣೆಯನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು.

ಕಾರ್ಯಕ್ರಮದಲ್ಲಿ ರೈತ ಸಂಘದ ಕಾರ್ಯದರ್ಶಿ ನರಸಿಂಹ ನಾಯಕ್ ಹಾಗೂ ನಿವೃತ್ತ ಮುಖ್ಯ ಶಿಕ್ಷಕರು ಮತ್ತು ಗ್ರಾಮ ಪಂಚಾಯಿತಿ ಮಾಜಿ ಸದಸ್ಯರಾದ ರುದ್ರಮೂರ್ತಿ ಹೆಚ್.ಆರ್. ಅವರು ಧ್ವಜಾರೋಹಣ ನೆರವೇರಿಸಿದರು. ಬಳಿಕ ವಿದ್ಯಾರ್ಥಿಗಳಿಗೆ ದೇಶಭಕ್ತಿ, ದೇಶಪ್ರೇಮ ಹಾಗೂ ನಮ್ಮ ಸಂಸ್ಕೃತಿಯ ಮಹತ್ವದ ಕುರಿತು ಮಾಹಿತಿ ನೀಡಲಾಯಿತು.

ಇದೇ ವೇಳೆ ಮಾರಶೆಟ್ಟಿಹಳ್ಳಿ ಗ್ರಾಮದ ರೈತ ಕುಟುಂಬದಲ್ಲಿ ಜನಿಸಿ, ವೈದ್ಯಕೀಯ ವಿದ್ಯಾಭ್ಯಾಸದಲ್ಲಿ ಚಿನ್ನದ ಪದಕ ಪಡೆದಿರುವ ಡಾ. ತನುಷಾ ಅವರ ಪ್ರತಿಭೆಯನ್ನು ಗುರುತಿಸಿ ಶ್ರೀರಂಗ ವಿದ್ಯಾಸಂಸ್ಥೆಯ ವತಿಯಿಂದ ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಹಡವನಹಳ್ಳಿ ಕ್ಲಸ್ಟರ್‌ನ ಕ್ಷೇತ್ರ ಸಂಪನ್ಮೂಲ ಅಧಿಕಾರಿ ಸತೀಶ್, ಸಂಸ್ಥೆಯ ಕಾರ್ಯದರ್ಶಿಗಳಾದ ಯೋಗೇಶ್, ಲಕ್ಷ್ಮಿ, ಹೇಮಚಂದ್ರ, ಸುಮಂತ್ ಎಚ್.ಆರ್., ಡಾ. ತನುಷಾ ಸೇರಿದಂತೆ ಶಿಕ್ಷಕರು, ವಿದ್ಯಾರ್ಥಿಗಳು ಹಾಗೂ ಪೋಷಕರು,ಗಣ್ಯರು ಉಪಸ್ಥಿತರಿದ್ದರು.

## ಜಿಲ್ಲೆಯಾದ್ಯಂತ ಸ್ವಾತಂತ್ರ್ಯೋತ್ಸವ ಸಂಭ್ರಮ





**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನದ ಹಾಕಿ ಕ್ರೀಡಾಂಗಣದಲ್ಲಿಂದು ನಡೆದ 80ನೇ ಸ್ವಾತಂತ್ರ್ಯ ದಿನಾಚರಣೆಯಂದು ಪತ್ರಿಕೋದ್ಯಮ ಕ್ಷೇತ್ರದಿಂದ ಪ್ರತಾಪ್ ಜಿ.ಹಿರೀಸಾವೆ, ಭಾರತಿ ಕೆ. ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಗಣ್ಯರನ್ನು ಸಚಿವರಾದ ಕೆ.ಎಂ.ಶಿವಲಿಂಗೇಗೌಡ ಹಾಗೂ ಗಣ್ಯರು ಸನ್ಮಾನಿಸಿ ಅಭಿನಂದಿಸಿದರು. ಈ ವೇಳೆ ಸಂಸದ ಶ್ರೇಯಸ್ ಪಟೇಲ್, ಸ್ಥಳೀಯ ಶಾಸಕ ಹೆಚ್.ಪಿ.ಸ್ವರೂಪ್ ಪ್ರಕಾಶ್ ಹಾಗೂ ಜಿಲ್ಲಾಡಳಿತದ ಅಧಿಕಾರಿಗಳು ಹಾಜರಿದ್ದರು. ಇದಕ್ಕೂ ಮುನ್ನ ಪೊಲೀಸ್, ಎನ್‌ಸಿಸಿ ಹಾಗೂ ಕಾಲೇಜಿ ವಿದ್ಯಾರ್ಥಿಗಳು ನಡೆಸಿಕೊಟ್ಟ ಆಕರ್ಷಕ ಪಥ ಸಂಚಲನ ಎಲ್ಲರ ಗಮನ ಸೆಳೆಯಿತು.




ಸ್ವಾತಂತ್ರ್ಯೋತ್ಸವ ಹಿನ್ನೆಲೆಯಲ್ಲಿ, ಜಿಲ್ಲೆಯಾದ್ಯಂತ ಪುಟಾಣಿಗಳು ವಿವಿಧ ರೀತಿಯಲ್ಲಿ ಸಂಭ್ರಮಾಚರಣೆ ಮಾಡಿದರು.




**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ವಿಜಯನಗರ ಬಡಾವಣೆಯ ಪತಂಜಲಿ ಯೋಗ ಕೇಂದ್ರಲ್ಲಿ ಇಂದು 80ನೇ ಸ್ವತಂತ್ರ ದಿನಾಚರಣೆ ಆಚರಿಸಲಾಯಿತು. ಯೋಗ ಕೇಂದ್ರದ ಮುಖ್ಯಸ್ಥರು ಹಾಗೂ ಯೋಗಪಟುಗಳು ಕೇಂದ್ರದ ಮುಂದೆ ಧ್ವಜಾರೋಹಣ ನೆರವೇರಿಸಿ ರಾಷ್ಟ್ರಧ್ವಜಕ್ಕೆ ಗೌರವ ಸಲ್ಲಿಸಿ, ಬಳಿಕ ಪರಸ್ಪರ ಸ್ವತಂತ್ರ ದಿನಾಚರಣೆ ಶುಭ ಕೋರಿದರು.

## ಸಕಲೇಶಪುರದಲ್ಲಿ ಅದ್ದೂರಿಯಾಗಿ ನಡೆದ 80ನೇ ಸ್ವಾತಂತ್ರ್ಯೋತ್ಸವ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ಸ್ವಾತಂತ್ರ್ಯ ಹೋರಾಟದ ಇತಿಹಾಸವನ್ನು ವಿದ್ಯಾರ್ಥಿಗಳು ಹಾಗೂ ಪ್ರತಿಯೊಬ್ಬ ನಾಗರಿಕರು ತಿಳಿದುಕೊಳ್ಳಬೇಕು. ದೇಶದ ಸ್ವಾತಂತ್ರ್ಯಕ್ಕಾಗಿ ತ್ಯಾಗ, ಬಲಿದಾನ ಮಾಡಿದವರ ಜೀವನ ಹಾಗೂ ಹೋರಾಟವನ್ನು ಅರಿತು ದೇಶದ ಅಭಿವೃದ್ಧಿಗೆ ಪ್ರತಿಯೊಬ್ಬರೂ ಕೊಡುಗೆ ನೀಡಬೇಕು ಎಂದು ಶಾಸಕ ಸಿಮೆಂಟ್ ಮಂಜು ಹೇಳಿದರು.

ಪಟ್ಟಣದ ಸುಭಾಷ್ ಮೈದಾನದಲ್ಲಿ ಶನಿವಾರ ನಡೆದ 80ನೇ ಸ್ವಾತಂತ್ರ್ಯೋತ್ಸವ ಕಾರ್ಯಕ್ರಮದಲ್ಲಿ ಅವರು ಮಾತನಾಡಿ, ಸ್ವಾತಂತ್ರ್ಯವು ಸುಲಭವಾಗಿ ದೊರೆತದ್ದಲ್ಲ. ವ್ಯಾಪಾರಕ್ಕಾಗಿ ಭಾರತಕ್ಕೆ ಬಂದ ಬ್ರಿಟಿಷರು ದೇಶದ ಸಂಪತ್ತನ್ನು ಕೊಳ್ಳೆ ಹೊಡೆದು ಸುಮಾರು 200 ವರ್ಷಗಳ ಕಾಲ ಆಳಿದರು. ಭಗತ್ ಸಿಂಗ್ ಸೇರಿದಂತೆ ಅನೇಕರು ದೇಶಕ್ಕಾಗಿ ತಮ್ಮ ಜೀವನವನ್ನೇ ಅರ್ಪಿಸಿದ್ದಾರೆ. ಇಂತಹ ಸ್ವಾತಂತ್ರ್ಯ ಹೋರಾಟಗಾರರ ಜೀವನ ಚರಿತ್ರೆಯನ್ನು ವಿದ್ಯಾರ್ಥಿಗಳು ತಿಳಿದುಕೊಳ್ಳಬೇಕು. ದೇಶದ ಇತಿಹಾಸದ ಅರಿವು ಮೂಡಿಸುವ ಜವಾಬ್ದಾರಿ ಶಿಕ್ಷಕರು, ಪೋಷಕರು ಹಾಗೂ ಸಮಾಜದ ಮೇಲಿದೆ ಎಂದರು. ದೇಶ ಮೊದಲು ಎಂಬ ಭಾವನೆ ಪ್ರತಿಯೊಬ್ಬರಲ್ಲೂ ಮೂಡಬೇಕು. ಸಕಲೇಶಪುರದ ಪ್ರಕೃತಿ ಸೌಂದರ್ಯ ಹಾಗೂ ಪ್ರವಾಸಿ ತಾಣಗಳನ್ನು ಸಂರಕ್ಷಿಸಿ ತಾಲೂಕನ್ನು ಅಭಿವೃದ್ಧಿಪಡಿಸುವ ಜವಾಬ್ದಾರಿ ಎಲ್ಲರ ಮೇಲಿದೆ ಎಂದು ಹೇಳಿದರು.

ಸರ್ಕಾರಿ ಕಚೇರಿಗಳಿಗೆ ಬರುವ ಸಾಮಾನ್ಯ ಜನರಿಗೆ ಗೌರವಯುತವಾಗಿ ಸ್ಪಂದಿಸಿ ಅವರ ಕೆಲಸಗಳನ್ನು ಮಾಡಿಕೊಡುವ ವಾತಾವರಣ ನಿರ್ಮಾಣವಾಗಬೇಕು. ಬಡವರು ತಮ್ಮ ದಿನದ ಕೂಲಿಯನ್ನೂ ಲೆಕ್ಕ ಹಾಕಿಕೊಂಡು ಕಚೇರಿಗಳಿಗೆ ಬರುತ್ತಾರೆ. ಹೀಗಾಗಿ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳು ಸಾರ್ವಜನಿಕರ ಹಿತ ಕಾಪಾಡಬೇಕು ಎಂದು ಶಾಸಕ ಸಿಮೆಂಟ್ ಮಂಜು ಹೇಳಿದರು.

ಉಪವಿಭಾಗಾಧಿಕಾರಿ ಹುಲ್ಲುಮನಿ ತಿಮ್ಮಣ್ಣ ಮಾತನಾಡಿ, ಭಾರತಕ್ಕೆ ಸ್ವಾತಂತ್ರ್ಯವು ಯಾರೋ ಹೂವಿನ ಬುಟ್ಟಿಯಲ್ಲಿ ತಂದುಕೊಟ್ಟದ್ದಲ್ಲ. ಸುಮಾರು 200 ವರ್ಷಗಳ ಬ್ರಿಟಿಷರ ಶೋಷಣೆ ಹಾಗೂ ದಮನಕಾರಿ ಆಡಳಿತವನ್ನು ದೇಶ ಎದುರಿಸಿತ್ತು. ದಾದಾಭಾಯಿ ನೌರೋಜಿ ಸೇರಿದಂತೆ ಹಲವು ನಾಯಕರು ಬ್ರಿಟಿಷರು ಭಾರತದ ಸಂಪತ್ತನ್ನು ಕೊಳ್ಳೆ ಹೊಡೆದ ರೀತಿಯನ್ನು ವಿವರಿಸಿದ್ದರು. ಲಾಲಾ ಲಜಪತ್ ರಾಯ್, ಬಾಲ ಗಂಗಾಧರ ತಿಲಕ್, ಬಿಪಿನ್ ಚಂದ್ರಪಾಲ್ ಸೇರಿದಂತೆ ಅನೇಕ ನಾಯಕರು ಸ್ವಾತಂತ್ರ್ಯ ಹೋರಾಟದಲ್ಲಿ ಪ್ರಮುಖ ಪಾತ್ರ ವಹಿಸಿದರು. ಮಹಾತ್ಮ ಗಾಂಧೀಜಿಯವರ ಅಹಿಂಸೆ ಹಾಗೂ ಸತ್ಯಾಗ್ರಹದ ಮೂಲಕ ಹೋರಾಟಕ್ಕೆ ಹೊಸ ದಿಕ್ಕು ದೊರೆಯಿತು. ಸ್ವಾತಂತ್ರ್ಯ ಹೋರಾಟಗಾರರ ತ್ಯಾಗವನ್ನು ಸ್ಮರಿಸಿ ದೇಶದ ಏಕತೆ ಹಾಗೂ ಅಭಿವೃದ್ಧಿಗೆ ಎಲ್ಲರೂ ಕೊಡುಗೆ ನೀಡಬೇಕು ಎಂದರು.

ಕಾರ್ಯಕ್ರಮದಲ್ಲಿ ಶಾಲಾ ಮಕ್ಕಳಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು. ಸಾಮಾಜಿಕ ಕ್ಷೇತ್ರದಲ್ಲಿ ಗಣನೀಯ ಸೇವೆ ಸಲ್ಲಿಸಿದವರನ್ನು ಸನ್ಮಾನಿಸಿ ಗೌರವಿಸಲಾಯಿತು.

## ಸ್ಕಾಲರ್ಸ್ ಶಾಲೆಯಲ್ಲಿ ಸಡಗರದ 80ನೇ ಸ್ವಾತಂತ್ರ್ಯ ದಿನಾಚರಣೆ




**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಸ್ಥಳೀಯ ಸ್ಕಾಲರ್ಸ್ ಶಾಲೆಯಲ್ಲಿ ಶನಿವಾರದಂದು 80ನೇ ಸ್ವಾತಂತ್ರ್ಯ ದಿನಾಚರಣೆಯನ್ನು ಅತ್ಯಂತ ಸಡಗರ ಹಾಗೂ ಅರ್ಥಪೂರ್ಣವಾಗಿ ಆಚರಿಸಲಾಯಿತು.

ಕಾರ್ಯಕ್ರಮದಲ್ಲಿ ರಾಷ್ಟ್ರಧ್ವಜಾ ರೋಹಣ ನೆರವೇರಿಸಿ ಮಾತನಾಡಿದ ಭಾರತೀಯ ಸೇನೆಯ ಹೆಮ್ಮೆಯ ಸುಪುತ್ರ ಹಾಗೂ ನಿವೃತ್ತ ಸುಬೇದಾರ್ ಸೋಮಶೇಖರ್ ಅವರು, ತಮ್ಮ ಬಾಲ್ಯದ ಸ್ವಾತಂತ್ರ್ಯ ದಿನಾಚರಣೆಯ ಸವಿನೆನಪುಗಳನ್ನು ಮೆಲುಕು ಹಾಕಿದರು. "ದೇಶ ಸೇವೆಯೇ ಈಶ ಸೇವೆ. ಯುವಜನತೆ ಸೇನೆಗೆ ಸೇರುವ ಮೂಲಕ ಈ ಭವ್ಯ ದೇಶಕ್ಕೆ ಸೇವೆ ಸಲ್ಲಿಸಲು ಮುಂದಾಗಬೇಕು. ಇಂದಿನ ವಿದ್ಯಾರ್ಥಿಗಳು ಸ್ವಾತಂತ್ರ್ಯದ ನೈಜ ಮೌಲ್ಯ ಹಾಗೂ ಅದರ ಹಿಂದಿನ ತ್ಯಾಗವನ್ನು ಅರಿಯಬೇಕು" ಎಂದು ವಿದ್ಯಾರ್ಥಿಗಳಿಗೆ ಕರೆ ನೀಡಿದರು.

ಶಾಲೆಯ ಆಡಳಿತಾಧಿಕಾರಿ ಡಾ. ಎಚ್.ಎನ್. ಚಂದ್ರಶೇಖರ್ ಅವರು ಮಾತನಾಡಿ, 80ನೇ ಸ್ವಾತಂತ್ರ್ಯ ದಿನಾಚರಣೆಯ ಶುಭಾಶಯಗಳನ್ನು ಕೋರಿದರು. ಜೊತೆಗೆ, ಮಕ್ಕಳು ಈ ಐತಿಹಾಸಿಕ ದಿನದ ಮಹತ್ವವನ್ನು ಅರಿತು ಉತ್ತಮ ಪ್ರಜೆಗಳಾಗಿ ರೂಪುಗೊಳ್ಳಬೇಕು ಎಂದು ಕಿವಿಮಾತು ಹೇಳಿದರು.

ಇದೇ ಸಂದರ್ಭದಲ್ಲಿ ಶಾಲೆಯ ವಿದ್ಯಾರ್ಥಿಗಳು ಪ್ರಸ್ತುತಪಡಿಸಿದ ದೇಶಭಕ್ತಿ ಗೀತೆಗಳ ಗಾಯನ ಹಾಗೂ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಎಲ್ಲರಲ್ಲೂ ದೇಶಪ್ರೇಮದ ಕಿಚ್ಚು ಹೊತ್ತಿಸಿದವು. ವಿಶೇಷವಾಗಿ, ಪುಟಾಣಿ ವಿದ್ಯಾರ್ಥಿಗಳು ಸ್ವಾತಂತ್ರ್ಯಕ್ಕಾಗಿ ಪ್ರಾಣತೆತ್ತ ಮಹನೀಯರ ವೇಷಭೂಷಣಗಳನ್ನು ಧರಿಸಿ ಹೆಜ್ಜೆಹಾಕಿದ್ದು ನೋಡುಗರ ಗಮನ ಸೆಳೆಯುವ ಜೊತೆಗೆ ಪೋಷಕರ ಮೆಚ್ಚುಗೆಗೆ ಪಾತ್ರವಾಯಿತು.

ಕಾರ್ಯಕ್ರಮದಲ್ಲಿ ಶಾಲೆಯ ಸಂಸ್ಥಾಪಕರಾದ ಲಕ್ಷ್ಮಿ ನಾಗರಾಜು, ಕಾರ್ಯದರ್ಶಿ ಮಮತಾ ಚಂದ್ರಶೇಖರ್, ಮುಖ್ಯೋಪಾಧ್ಯಾಯಿನಿ ಸಂಧ್ಯಾ ಹಾಗೂ ಶಾಲೆಯ ಎಲ್ಲಾ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

# ಪತ್ರಕರ್ತರ ಸಂಘದಲ್ಲಿ ಸ್ವಾತಂತ್ರ್ಯ ದಿನಾಚರಣೆ

ಹಾಸನ: ಹಾಸನ ಜಿಲ್ಲಾ ಪತ್ರಕರ್ತರ ಸಂಘದಲ್ಲಿಂದು 80 ನೇ ಸ್ವಾತಂತ್ರ್ಯ ದಿನಾಚರಣೆ ಆಚರಿಸಲಾಯಿತು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶುಭಾನ್ವಿತಾ ಅವರು ಧ್ವಜಾರೋಹಣ ನೆರವೇರಿಸಿದರು.

ನಂತರ ಮಾತನಾಡಿದ ಅಚರು, ಮೊದಲಿಗೆ ಸಮಸ್ತ ಹಾಸನ ಜನತೆಗೆ 80 ನೇ ಸ್ವಾತಂತ್ರ್ಯ ದಿನದ ಶುಭಾಶಯ ಕೋರಿದರು. ನಮ್ಮೆಲ್ಲರಿಗೂ ಸಿಕ್ಕಿರುವ ಸ್ವಾತಂತ್ರ್ಯ ಅಪಾರ ಮಂದಿಯ ತ್ಯಾಗ, ಬಲಿದಾನ ಹಾಗೂ ಎರಡೂ ಶತಮಾನಗಳ ಸುದೀರ್ಘ ಹೋರಾಟದ ಫಲವಾಗಿ ಸಿಕ್ಕಿದೆ. ಇದಕ್ಕೆ ಧಕ್ಕೆ ಆಗದಂತೆ



ಉಳಿಸಿಕೊಂಡು ಹೋಗುವುದು ಸರ್ವರ ಜವಾಬ್ದಾರಿ ಎಂದರು. ಹಾಗೆಯೇ ದೇಶದ ಅಖಂಡತೆ ಮತ್ತು ಸಾರ್ವ ಭೌಮತ್ವ ಕಾಪಾಡುವುದು ಪ್ರತಿಯೊಬ್ಬರ ಕರ್ತವ್ಯ ಎಂದರು.

ವಿದ್ಯಾರ್ಥಿಗಳು ಉತ್ತಮ ವ್ಯಾಸಂಗದ ಮೂಲಕ ದೇಶದ ಗೌರವ ಎತ್ತಿ ಹಿಡಿಯಬೇಕು. ಹಾಗೆಯೇ ಯಾವುದೇ ವೃತ್ತಿ ಮಾಡುವವರು ಅದಕ್ಕೆ ಚ್ಯುತಿ ಬಾರದಂತೆ ಕೆಲಸ ಮಾಡಬೇಕು ಎಂದು ಕರೆ ನೀಡಿದರು.

ಮಾಧ್ಯಮ ಪ್ರಜಾಪ್ರಭುತ್ವದ ನಾಲ್ಕನೇ ಅಂಗ ಎನಿಸಿದ್ದು ಜವಾಬ್ದಾರಿ ಬಹು ದೊಡ್ಡದಿದೆ. ಸಮಾಜದ ಅರೆ ಕೊರೆ ತಿದ್ದಿ ಸರಿದಾರಿಗೆ ಕೊಂಡೊಯ್ಯುವ ಹೊಣೆಗಾರಿಕೆಯನ್ನು ಅಚ್ಚುಕಟ್ಟಾಗಿ ನಿಭಾಯಿಸಬೇಕೆಂದರು.

ಸಂಘದ ಜಿಲ್ಲಾಧ್ಯಕ್ಷರಾದ ಜೆ.ಆರ್.ಕೆಂಚೇಗೌಡರು ಮಾತನಾಡಿ, ಸ್ವಾತಂತ್ರ್ಯದ ಘನತೆ, ಗೌರವವನ್ನು ನಾವೆಲ್ಲರೂ ಎತ್ತಿ ಹಿಡಿಯೋಣ ಎಂದು ಹೇಳಿ, ಸರ್ವರಿಗೂ ಸ್ವಾತಂತ್ರ್ಯ ದಿನಾಚರಣೆ ಶುಭಾಶಯ ಕೋರಿದರು.

ನಂತರ ನೆರೆದಿದ್ದ ಎಲ್ಲರೂ ಮಹಾತ್ಮ ಗಾಂಧೀಜಿ ಹಾಗೂ ಡಾ.ಬಿ.ಆರ್.ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಗೌರವ ಸಲ್ಲಿಸಿದರು.

# ಜಿಲ್ಲೆಯ ಘನತೆ ಎತ್ತಿ ಹಿಡಿಯೋಣ

## ದ್ವೇಷ ಮರೆತು ಅಭಿವೃದ್ಧಿಗೆ ಸಹಕರಿಸುವಂತೆ ಶಿವಲಿಂಗೇಗೌಡ ಮನವಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಅಭಿವೃದ್ಧಿ ಜೊತೆಗೆ ರಾಜ್ಯ, ದೇಶದಲ್ಲಿ ಹಾಸನ ಜಿಲ್ಲೆಗಿರುವ ಘನತೆ-ಗೌರವ ಎತ್ತಿ ಹಿಡಿಯಲು ದ್ವೇಷ ಮರೆತು, ನಾವೆಲ್ಲರೂ ಒಟ್ಟಾಗಿ ಶ್ರಮಿಸೋಣ, ಇದಕ್ಕೆ ಪ್ರತಿಯೊಬ್ಬರೂ ಸಹಕಾರ ನೀಡುವಂತೆ ನೂತನ ಸಚಿವ ಕೆ.ಎಂ.ಶಿವಲಿಂಗೇಗೌಡ ಮನವಿ ಮನವಿ ಮಾಡಿದರು.




ಜಿಲ್ಲಾ ಪತ್ರಕರ್ತರ ಸಂಘದಲ್ಲಿಂದು ಸನ್ಮಾನ ಸ್ವೀಕರಿಸಿ ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಾನು ಹಳ್ಳಿಯಿಂದ ಬಂದವನು, ಹಳ್ಳಿಯ ನಾಡಿ ಮಿಡಿತ ಗೊತ್ತಿದೆ. ಗ್ರಾಮೀಣ ಜನರ ಕಡೆಗೇ ತಮ್ಮ ಒಲವು ಎಂದು ಹೇಳಿದರು.

ಈ ಜಿಲ್ಲೆಗೆ ದೇವೇಗೌಡರು ದೇಶದ ಪ್ರಧಾನಿ ಆಗುವ ಮೂಲಕ ಮೂಲಕ ಜಿಲ್ಲೆಯ ಖ್ಯಾತಿಯನ್ನು ರಾಷ್ಟ್ರಕ್ಕೆ ಪರಿಚಯಿಸಿದ್ದಾರೆ. ನಾಮೂ ಜಿಲ್ಲೆಯ ಗೌರವ ಎತ್ತಿ ಹಿಡಿಯುವ ಪ್ರಾಮಾಣಿಕ ಕೆಲಸ ಮಾಡೋಣ, ಸುಲಲಿತ ಆಡಳಿತ ನೀಡಲು ಶ್ರಮಿಸೋಣ ಎಂದರು.

ವ್ಯವಸ್ಥಿತ ಆಡಳಿತ ಕೊಡುವುದು ನಮ್ಮ ಕರ್ತವ್ಯ, ಇದಕ್ಕೆ ಎಲ್ಲರೂ ಸಹಕಾರ ಕೊಡಿ ಎಂದು ಮನವಿ ಮಾಡಿದರು.

ಎಲ್ಲ ಕ್ಷೇತ್ರಗಳಲ್ಲಿ ಸಾಧನೆ ಮಾಡಬೇಕಿದೆ, ಸದ್ಯ ಜಿಲ್ಲೆಯಲ್ಲಿ ಬರ ಆವರಿಸಿದ್ದು, ಎದುರಾಗಿರುವ ಸಂಕಷ್ಟವನ್ನು ಸುಧಾರಣೆ ಮಾಡುವ ಪ್ರಾಮಾಣಿಕ ಕೆಲಸ ಮಾಡಬೇಕಿದೆ. ಜಿಲ್ಲಾಡಳಿತ ಅಧಿಕಾರಿಗಳು ಉತ್ತಮ ರೀತಿಯಲ್ಲಿ ಕೆಲಸ ಮಾಡಿದರೆ ಈ ಸ್ಥಿತಿಯಿಂದ ಹೊರ ಬರಲು ಸಾಧ್ಯ ಎಂದರು.

ಹಾಗೆಯೇ ವಿಳಂಬವಾಗಿರುವ ವಿಮಾನ ನಿಲ್ದಾಣ ಕಾಮಗಾರಿಯನ್ನೂ ಆದಷ್ಟು ಬೇಗ ಮುಗಿಸುವುದು ನಮ್ಮ ಮುಂದೆ ಇರುವು ಆದ್ಯತೆ. ಹಾಗೆಯೇ ಅಧಕ್ಕೆ ನಿಂತಿರುವ ಏತ ನೀರಾವರಿ ಯೋಜನೆ ಮುಗಿಸುತ್ತೇವೆ.

ಈ ವಿಚಾರದಲ್ಲಿ ಸಂಘರ್ಷ ಇಲ್ಲ, ದ್ವೇಷ ಮಾಡಲ್ಲ, ಅಭಿವೃದ್ಧಿಯೇ ನಮ್ಮ ಮೂಲ ಮಂತ್ರ, ನಾನು ಗೆದ್ದಿರುವುದೂ ಅಭಿವೃದ್ಧಿ ಕೆಲಸ ದಿಂದಲೇ, ಈ ಬಾರಿಯೂ ಹಾಸನಾಂಬೆ ಜಾತ್ರೋತ್ಸವವನ್ನು ಅಚ್ಚುಕಟ್ಟಾಗಿ ಮಾಡೋಣ ಎಂದರು.

ಜಿಲ್ಲೆಯಲ್ಲಿ ಎದುರಾಗಿರುವ ಬರದ ಬಗ್ಗೆ ಅಧ್ಯಯನ ಮುಗಿದಿದ್ದು, ಅಧಿಕಾರಿಗಳಿಂದ ವರದಿ ಪಡೆದು ಶೀಘ್ರವೇ ಸರ್ಕಾರಕ್ಕೆ ವರಿ ನೀಡಲಾಗುವುದು ಎಂದು ತಿಳಿಸಿದರು. ಜೊತೆಗೆ ಎನ್‌ಡಿಆರ್‌ಎಫ್ ಮಾರ್ಗದರ್ಶನದಂತೆ ಮತ್ತೊಂದು ಪರಿಹಾರಕ್ಕೂ ಕೇಂದ್ರಕ್ಕೆ ವರದಿ ನೀಡುವುದಾಗಿ ಇದೇ ವೇಳೆ ಸಚಿವರು ತಿಳಿಸಿದರು.

ಬೆಳೆವಿಮೆ ಯೋಜನೆ ವಿಧಾನ ಬದಲಾಗಿದ್ದು, ಯಾರು ಫಸಲ್ ಬಿಮಾ ಯೋಜನೆಯಡಿ ಕಂತು ಪಾವತಿಸಿ ವಿಮೆ ಮಾಡಿಸುತ್ತಾರೋ ಅಂಥವರಿಗೆ ಶೇ.80 ರಷ್ಟು ಪರಿಹಾರ ಸಿಗಲಿದೆ. ಹಾಗಾಗಿ ಎಲ್ಲರೂ ವಿಮೆ ಮಾಡಿಸುವಂತೆ ಮನವಿ ಮಾಡಿದರು.

ಬಿಳಿಸುಳಿ ರೋಗದಿಂದ 1 ಲಕ್ಷ ಹೆಕ್ಟೇರ್‌ನಲ್ಲಿ ಬಿತ್ತನೆ ಮಾಡಿದ್ದ ಬೆಳೆ ಬಹುತೇಕ ಹಾಳಾಗಿದ್ದು, ಪರಿಹಾರ ಕೊಡಿಸುವುದು ನಮ್ಮ ಮುಂದಿದೆ.

ಹೇಮಾವತಿ ಜಲಾಶಯದಿಂದ ಕೆರೆಕಟ್ಟೆಗಳಿಗೆ ನೀರು ತುಂಬಿಸಲು ಇಂದಿನಿಂದಲೇ ನೀರು ಬಿಡುಗಡೆಗೆ ಆದೇಶ ಮಾಡುವುದಾಗಿ ಸಚಿವರು ಪ್ರಶ್ನಿಸಿದರು. ಗೊರೂರಿನಲ್ಲಿ ಬೃಂದಾವನ ಮಾದರಿ ಪಾರ್ಕ್ ನಿರ್ಮಾಣ ಮಾಡಲು ಕ್ರಮ ವಹಿಸುವುದಾಗಿ ಭರವಸೆ ನೀಡಿದರು.

ಜಿಲ್ಲೆಯ ಕಾಡಾನೆ ಸಮಸ್ಯೆ ಬಗ್ಗೆ ಅರಿವಿದೆ. ಅರಸೀಕೆರೆಯಲ್ಲಿ ಕರಡಿಧಾಮ ಮಾಡಿದರೆ ಅಲ್ಲಿಬೇಕಾದ ಸೌಲಭ್ಯಗಳನ್ನೇ ಕಲ್ಪಿಸಿಲ್ಲ. ಹಾಗೆಯೇ ಆನೆ ಸಮಸ್ಯೆ ಬಗೆಹರಿಸಲು ಮುಖ್ಯವಾಗಿ ಅವುಗಳಿಗೆ ಬೇಕಾದ ಬಿದಿರು ಬೆಳೆಯುವ ಕೆಲಸ ಆಗಬೇಕು. ಹಿಂದೆ ಆನೆ ಸಂತತಿ ಕಡಿಮೆ ಇದ್ದವು, ಈಗ ಜಾಸ್ತಿ ಆಗಿದೆ.

ಕಾಡಾನೆ ಸಮಸ್ಯೆಗೆ ಯಾವ ರೀತಿಯ ಪರಿಹಾರ ಕಂಡು ಹಿಡಿಯಬೇಕು ಎಂಬ ಬಗ್ಗೆ ವಿಸ್ತೃತ ಚರ್ಚೆ ನಡೆಸಿ, ಸರ್ಕಾರಕ್ಕೆ ವರದಿ ಸಲ್ಲಿಸಿ ಸಮಸ್ಯೆಗೆ ಪರಿಹಾರ ಕಂಡು ಹಿಡಿಯುವ ಕೆಲಸ ಮಾಡಲಾಗುವುದು. ಸಂಘರ್ಷ ನಿವಾರಣೆಗೆ ವೈಜ್ಞಾನಿಕ ಸಂಶೋಧನೆ ನಡೆಸುವ ಬಗ್ಗೆ ಸಿಎಂ ಜೊತೆ ಚರ್ಚೆ ಮಾಡುವ ಭರವಸೆ ನೀಡಿದರು.

ಇದೇ ವೇಳೆ ಸಂಘದಿಂದ ಸಚಿವರನ್ನು ಹಾರ್ದಿಕವಾಗಿ ಅಭಿನಂದಿಸಲಾಯಿತು.

ಸಂಸದ ಶ್ರೇಯಸ್ ಪಟೇಲ್, ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ, ಎಸ್ಪಿ ಶುಭಾನ್ವಿತಾ, ಜಿಪಂ ಸಿಇಓ ಶುಭಂ ಶುಕ್ಲ, ಡಿಎಫ್‌ಓ ಸೌರಭ್ ಕುಮಾರ್, ಹುಡಾ ಅಧ್ಯಕ್ಷ ಪಟೇಲ್ ಶಿವಪ್ಪ, ಕಾಂಗ್ರೆಸ್ ಮುಖಂಡ ಬನವಾಸೆ ರಂಗಸ್ವಾಮಿ, ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷ ಕೆ.ಆರ್.ಕೆಂಜೇಗೌಡ ಮೊದಲಾದವರಿದ್ದರು.

### ಇಲಾಖೆ ಸುಧಾರಣೆಗೆ ಕ್ರಮ

ತಮಗೆ ವಹಿಸಿರುವ ಅಬಕಾರಿ ಇಲಾಖೆ ರಾಜ್ಯದ ಆಯವ್ಯಯದಲ್ಲಿ ಪ್ರಮುಖ ಪಾತ್ರ ವಹಿಸಲಿದೆ. ಸಿಎಂ ಪರಮಾಧಿಕಾರದಿಂದ ಈ ಖಾತೆ ಸಿಕ್ಕಿದೆ, ಇದನ್ನೇ ನನಗೆ ಏಕೆ ನೀಡಿದ್ದಾರೆ ಎಂಬ ಬಗ್ಗೆ ಅವರೊಂದಿಗೆ ಚರ್ಚಿಸುವೆ ಎಂದು ಸಚಿವರು ತಿಳಿಸಿದರು.

ಇಲಾಖೆ ವ್ಯಾಪ್ತಿಯಲ್ಲಿರುವ ಲೋಪ ದೋಷ ಸರಿಪಡಿಸಲು ಗಮನ ಹರಿಸಲಾಗುವುದು. ಸುಧಾರಣೆಗೆ ಒತ್ತು ನೀಡಲಾಗುವುದು. ಇಲಾಖೆ ಆದಾಯದ ಮೂಲ ಕಡಿಮೆ ಆಗಬಾರದು, ಆದರೆ ತಪ್ಪು ಸರಿಯಾಗಬೇಕು.

ಬೆಳಗ್ಗೆಯೇ ವೈನ್‌ಶಾಪ್ ಬಾಗಿಲು ತೆರೆಯುವ ಬಗ್ಗೆ, ಶಾಲಾ-ಕಾಲೇಜು ಬಳಿ ಮದ್ಯದಂಗಡಿ ಇರುವ ಬಗ್ಗೆ ಪರಿಶೀಲಿಸಿ ಸೂಕ್ತ ಕ್ರಮ ವಹಿಸಲಾಗುವುದು. ನನ್ನ ಅವಧಿಯಲ್ಲಿ ತಪ್ಪು ಮರುಕಳಿಸಲ್ಲ. ಕಂಡು ಬಂದರೆ ನಿರ್ದಾಕ್ಷಿಣ್ಯ ಕ್ರಮ ಖಚಿತ ಎಂದು ಎಚ್ಚರಿಸಿದರು. ಮುಂದಿನ ದಿನಗಳಲ್ಲಿ ಹಾಸನ ವಿವಿ ಸಮಸ್ಯೆ ಬಗೆಹರಿಸಲು ಸಭೆ ನಡೆಸಿ ಗಮನ ಹರಿಸಲಾಗುವುದು ಎಂದರು.

# ನೈಜ ವರದಿ ತಯಾರಿಸಲು ಅಧಿಕಾರಿಗಳಿಗೆ ಸೂಚನೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ : ಜಿಲ್ಲೆಯನ್ನು ಬರಪೀಡಿತ ಪ್ರದೇಶ ಎಂದು ಕೇಂದ್ರ ಸರ್ಕಾರದಿಂದ ಘೋ?ಣೆ ಮಾಡಿಸುವ ನಿಟ್ಟಿನಲ್ಲಿ ವರದಿ ಸಲ್ಲಿಸಲು ಪೂರ್ಣ ಪ್ರಮಾಣದಲ್ಲಿ ನೈಜ ವರದಿ ತಯಾರಿಸುವಂತೆ ಅಬಕಾರಿ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಕೆ.ಎಂ.ಶಿವಲಿಂಗೇಗೌಡ ಅವರು ಅಧಿಕಾರಿಗಳಿಗೆ ಸೂಚಿಸಿದ್ದಾರೆ.



ಜಿಲ್ಲಾ ಪಂಚಾಯಿತಿ ಹೊಯ್ಸಳ ಸಭಾಂಗಣದಲ್ಲಿ ಇಂದು ಬರಪರಿಸ್ಥಿತಿ ಹಾಗೂ ಜಿಲ್ಲಾ ಮಟ್ಟದ ಪ್ರಗತಿ ಪರಿಶೀಲನಾ ಸಭೆ ನಡೆಸಿ ಮಾತನಾಡಿದ ಅವರು ಬರ ಪೀಡಿತ ಪ್ರದೇಶ ಎಂದು ಘೋಷಣೆ ಆದ ನಂತರ ಎನ್.ಡಿ.ಆರ್.ಎಫ್ ಮಾರ್ಗಸೂಚಿ ಅನ್ವಯ ಬೆಳೆ ಪರಿಹಾರ ರೈತರಿಗೆ ಕಲ್ಪಿಸಲು ಸಾಧ್ಯವಾಗುತ್ತದೆ ಎಂದರು.

ರೈತರು ವಿಮೆ ಕಟ್ಟಿದ್ದು, ಮಳೆ ಕೊರತೆಯಿಂದ ಬಿತ್ತನೆ ಮಾಡಿದೆ ಇರುವ ರೈತರಿಗೆ ಶೇ.25ರಷ್ಟು ಪರಿಹಾರ ಹಣವನ್ನು 15 ದಿನದೊಳಗೆ ನೀಡಲು ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ರೈತರು ವಿಮೆ ಕಟ್ಟಿದ್ದು, ಬೆಳೆ ನಷ್ಟವಾಗಿರುವ ರೈತರಿಗೆ ಮಧ್ಯಕಾಲಿಕ ಪರಿಹಾರ ನೀಡಲು ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದರಲ್ಲದೆ, ರೈತರಿಗೆ ಸಂಪೂರ್ಣ ಮಾಹಿತಿ ನೀಡಿ ಎಲ್ಲಾರಿಂದ ವಿಮೆ ಕಟ್ಟಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಈ ಬಾರಿ ಎ?ಟ್ಟು ರೈತರು ಯಾವ ಯಾವ ಬೆಳೆಗೆ ವಿಮೆ ಕಟ್ಟಿದ್ದಾರೆ ಎಂಬುದರ ಬಗ್ಗೆ ಸಂಪೂರ್ಣ ಮಾಹಿತಿ ನೀಡುವಂತೆ ಅಧಿಕಾರಿಗಳಿಗೆ ಸೂಚಿಸಿದರು. ಮುಸುಕಿನ ಜೋಳ ಬೆಳೆಗೆ ಬಿಳಿಸುಳಿ ರೋಗ ಬಂದಿರುವುದರಿಂದ ರೈತರಿಗೆ ಎರಡು ರೀತಿಯಲ್ಲಿ ನಷ್ಟ ಉಂಟಾಗಿದೆ ಒಂದು ಜೋಳದಿಂದ ಬರುತಿದ್ದ ಆರ್ಥಿಕ ಲಾಭ ಹಾಗೂ ಹೈನುಗಾರಿಕೆಗೆ ನೆರವಾಗಿದ್ದ ಜಾನುವಾರುಗಳ ಮೇವಿಗು ಸಹ ತೊಂದರೆಯಾಗಿದೆ ಎಂದ ಅವರು ಸಂಕಷ್ಟಕ್ಕೆ ಸಿಲುಕಿರುವ ರೈತರಿಗೆ ಪರಿಹಾರ ಒದಗಿಸಬೇಕಿದೆ ಎಂದರಲ್ಲದೆ, ಬಿಳಿಸುಳಿ ರೋಗ ಯಾವ ಕಾರಣಕ್ಕೆ ಬಂದಿದೆ ಎಂಬುದರ ಬಗ್ಗೆ ಸಂಪೂರ್ಣ ಮಾಹಿತಿ ನೀಡಲು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಮುಸುಕಿನ ಜೋಳ ಬೆಳೆ ಬಿಳಿಸುಳಿ ರೋಗದಿಂದ ನಾಶವಾಗಿರುವುದರಿಂದ ಜಾನುವಾರುಗಳಿಗೆ ಮೇವಿನ ಅಭಾವ ಸೃಷ್ಟಿಯಾಗುತ್ತದೆ, ಈ ನಿಟ್ಟಿನಲ್ಲಿ ನೀರಾವರಿ ಸೌಲಭ್ಯ ಹೊಂದಿರುವ ರೈತರಿಗೆ ಮೇವಿನ ಕಿರು ಪೊಟ್ಟಣಗಳನ್ನು ನೀಡಿ ಮೇವು ಬೆಳೆಯಲು ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಜಿಲ್ಲೆಯಲ್ಲಿ ಮಳೆ ಕೊರತೆ, ಜಲಾಶಯಗಳಲ್ಲಿ ನೀರಿನ ಲಭ್ಯತೆ ಮತ್ತಿತರ ವಿಷಯಗಳ ಕುರಿತು ಜಿಲ್ಲಾಧಿಕಾರಿ ಲತಾ ಕುಮಾರಿ ಸಭೆಯಲ್ಲಿ ವಿವರಿಸಿದರು.

ಸಂಸದರಾದ ಶ್ರೇಯಸ್ ಎಂ ಪಟೇಲ್, ಶಾಸಕರುಗಳಾದ ಸಿ.ಎನ್ ಬಾಲಕೃಷ್ಣ, ಸಿಮೆಂಟ್ ಮಂಜು, ಜಿಲ್ಲಾ ಪೊಲೀಸ್ ವರಿ?ಾಧಿಕಾರಿ ಶುಭನ್ವಿತಾ, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶುಭಂ ಶುಕ್ಲಾ, ಉಪ ಅರಣ್ಯ ಸಂರಕ್ಷಣಾಧಿಕಾರಿ ಸೌರಭ್ ಕುಮಾರ್, ಅಪರ ಜಿಲ್ಲಾಧಿಕಾರಿ ಕೃಷ್ಣಮೂರ್ತಿ ಉಪಸ್ಥಿತರಿದ್ದರು.

## ಅರಸೀಕೆರೆ: ಎಲ್ಲೆಡೆ ಸ್ವಾತಂತ್ರ್ಯ ದಿನಾಚರಣೆ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರಸೀಕೆರೆ : ನಗರ ಸೇರಿದಂತೆ ತಾಲೂಕಿನ ಜನತೆ 80ನೇ ಸ್ವಾತಂತ್ರ್ಯ ದಿನಾಚರಣೆಯನ್ನ ಸಡಗರ ಸಂಭ್ರಮದೊಂದಿಗೆ ಆಚರಿಸುವ ಮೂಲಕ ದೇಶಾಭಿಮಾನ ಮೆರೆದರು.

ರಾಷ್ಟ್ರೀಯ ಹಬ್ಬಗಳ ಆಚರಣೆ ಸಮಿತಿ ವತಿಯಿಂದ ನಗರದ ಜೇನುಕಲ್ಲು ಕ್ರೀಡಾಂಗಣದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ತಹಸೀಲ್ದಾರ್ ಸಂತೋಷ್ ಕುಮಾರ್ ರಾಷ್ಟ್ರ ಧ್ವಜಾರೋಹಣ ನೆರವೇರಿಸಿ ತಾಲೂಕಿನ ಜನತೆಗೆ ಸ್ವಾತಂತ್ರ್ಯ ದಿನಾಚರಣೆ ಶುಭ ಕೋರಿದರು.

ಆರಕ್ಷಕ ಇಲಾಖೆ ಸೇರಿದಂತೆ ಹೋಂ ಗಾರ್ಡ್ಸ್ ಹಾಗೂ ನಗರದ ನಾನಾ ಶಾಲಾ ವಿದ್ಯಾರ್ಥಿಗಳು ಸಮವಸ್ತ್ರದೊಂದಿಗೆ ಸ್ವತಂತ್ರ ದಿನಾಚರಣೆ ಕಾರ್ಯಕ್ರಮದಲ್ಲಿ ಪಾಲ್ಗೊಂಡರಲ್ಲದೆ ಆಕರ್ಷಕ ಪಥ ಸಂಚಲನ ಮೂಲಕ ರಾಷ್ಟ್ರಧ್ವಜಕ್ಕೆ ಗೌರವ ಸಮರ್ಪಿಸಿದರು. ಸಂಘ ಪರಿವಾರದ ವತಿಯಿಂದ ನಗರದ ಪಿ,ಪಿ ವೃತ್ತದಲ್ಲಿ ಶುಕ್ರವಾರ ಮಧ್ಯರಾತ್ರಿ ಸ್ವತಂತ್ರ ದಿನಾಚರಣೆ ಆಚರಣೆ ನಡೆಯಿತಲ್ಲದೆ ಅಖಂಡ ಭಾರತದ ಸಂಕಲ್ಪ ಮಾಡಲಾಯಿತು. ಅದೇ ರೀತಿ ಪ್ರಗತಿಪರ ಸಂಘಟನೆಗಳು ಜನಪರ ಸಂಘ ಸಂಸ್ಥೆಗಳು ತಮ್ಮ ಕಚೇರಿ ಆವರಣಗಳಲ್ಲಿ 80ನೇ ಸ್ವಾತಂತ್ರ್ಯ ದಿನಾಚರಣೆ ಆಚರಿಸಿ ಪರಸ್ಪರ ಶುಭಾಶಯ ವಿನಿಮಯ ಮಾಡಿಕೊಂಡ ದೃಶ್ಯ ಸಾಮಾನ್ಯವಾಗಿ ಕಂಡು ಬಂತು.

# ಅಭಿವೃದ್ಧಿ ಜೊತೆ ಶಾಂತಿ-ಸೌಹಾರ್ದತೆಗೆ ಆದ್ಯತೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಬೇಲೂರು: ಕ್ಷೇತ್ರದ ಅಭಿವೃದ್ಧಿ ಜೊತೆಗೆ ಎಲ್ಲ ವರ್ಗದ ಜನರು ಶಾಂತಿ, ನೆಮ್ಮದಿ ಹಾಗೂ ಸೌಹಾರ್ದತೆಯಿಂದ ಬದುಕಬೇಕು ಎಂಬುದು ತಮ್ಮ ಆಶಯ ಎಂದು ಶಾಸಕ ಹೆಚ್.ಕೆ. ಸುರೇಶ್ ಹೇಳಿದರು.



ಪಟ್ಟಣದ ಜೂನಿಯರ್ ಕಾಲೇಜು ಮೈದಾನದಲ್ಲಿ ನಡೆದ 80ನೇ ಸ್ವಾತಂತ್ರ್ಯ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ರಾಯಪುರದಲ್ಲಿ ಜಾತಿ, ಧರ್ಮದ ಭೇದವಿಲ್ಲದೆ ಅರ್ಹ 65 ಮಂದಿಗೆ ಹಕ್ಕುಪತ್ರ ವಿತರಿಸುವ ಕಾರ್ಯ ಕೈಗೊಳ್ಳ ಲಾಗಿದೆ. ಸಾರ್ವಜನಿಕರಿಗೆ ಅನುಕೂಲವಾಗುವ ವಾತಾವರಣ ನಿರ್ಮಿಸಲು ವಿವಿಧ ಅಭಿವೃದ್ಧಿ ಕಾಮಗಾರಿ ಕೈಗೊಂಡಿದ್ದು, ಬಹುತೇಕ ಕಾಮಗಾರಿ ಪೂರ್ಣಗೊಂಡಿವೆ ಎಂದರು.

ಹೊಯ್ಸಳ ಕ್ರೀಡಾಂಗಣವನ್ನು ಇನ್ನಷ್ಟು ಅಭಿವೃದ್ಧಿ ಪಡಿಸಲಾಗುತ್ತಿದ್ದು, ವಾಯುವಿಹಾರ ಸೇರಿದಂತೆ ವಿವಿಧ ಚಟುವಟಿಕೆಗಳಿಗೆ ಅನುಕೂಲವಾಗಲಿದೆ. ಪುರಸಭೆಯ 23 ವಾರ್ಡ್‌ಗಳಲ್ಲೂ ಸುಮಾರು 12.80 ಕೋಟಿ ವೆಚ್ಚದಲ್ಲಿ ಯಾವುದೇ ಭೇದ ಭಾವವಿಲ್ಲದೆ ಅಭಿವೃದ್ಧಿ ಕಾಮಗಾರಿ ಕೈಗೊಳ್ಳಲಾಗುತ್ತಿದೆ ಎಂದು ತಿಳಿಸಿದರು.

ಸಣ್ಣ ನೀರಾವರಿ ಯೋಜನೆಗಳಡಿ ಸುಮಾರು 30 ಕೋಟಿ ಅನುದಾನದಲ್ಲಿ ಚೆಕ್‌ಡ್ಯಾಂ ನಿರ್ಮಿಸಿರುವುದರಿಂದ ಅಂತರ್ಜಲ ಮಟ್ಟ ಹೆಚ್ಚಾಗಿ ರೈತರಿಗೆ ಅನುಕೂಲವಾಗಿದೆ.

ಎತ್ತಿನಹೊಳೆ ಯೋಜನೆಯಿಂದ ದ್ವಾರ ಸಮುದ್ರ ಹಾಗೂ ಹಳೇಬೀಡು ಕೆರೆಗಳಿಗೆ ನೀರು ಹರಿದಿರುವುದು ಕ್ಷೇತ್ರದ ಅಭಿವೃದ್ಧಿಯ ಪ್ರಮುಖ ಮೈಲಿಗಲ್ಲಾಗಿದೆ ಎಂದರು.

## ಇತಿಹಾಸದಲ್ಲಿ ಈ ದಿನ



### ಆಗಸ್ಟ್-16

1513 ರಲ್ಲಿ ಗಿನೆಗೇಟ್ (ಈಗ ಎಂಗುಯಿನೆಗಟ್ಟೆ) ನಲ್ಲಿ ನಡೆದ ಸ್ಪರ್ಸ್ ಕದನ : ಇಂಗ್ಲೆಂಡ್‌ನ ರಾಜ ಹೆನ್ರಿ ಗಿ ಮತ್ತು ಪವಿತ್ರ ರೋಮನ್ ಚಕ್ರವರ್ತಿ ಮ್ಯಾಕ್ಸಿಮಿಲಿಯನ್ ಫ್ರೆಂಚ್ ಪಡೆಗಳನ್ನು ಸೋಲಿಸಿದರು, ಪಟ್ಟಣವನ್ನು ವಶಪಡಿಸಿಕೊಂಡರು ಮತ್ತು ಫ್ರೆಂಚ್ ಅಶ್ವಸೈನ್ಯವನ್ನು ಸೋಲಿಸಿದರು.

1858: ಬ್ರಿಟನ್ನಿನ ರಾಣಿ ವಿಕ್ಟೋರಿಯಾ ಅಮೆರಿಕದ ಅಧ್ಯಕ್ಷ ಜೇಮ್ಸ್ ಬುಕಾನನ್ ಅವರಿಗೆ ಟ್ರಾನ್ಸ್ ಅಟ್ಲಾಂಟಿಕ್ ಟೆಲಿಗ್ರಾಫ್ ಕೇಬಲ್ ಮೂಲಕ ಮೊದಲ ಬಾರಿಗೆ ಟೆಲಿಗ್ರಾಫ್ ಕಳುಹಿಸಿದರು ; ಅವರು ಉತ್ತರಿಸುತ್ತಾ, "ಇದು ಹೆಚ್ಚು ಅದ್ಭುತವಾದ ವಿಜಯವಾಗಿದೆ, ಏಕೆಂದರೆ ಯುದ್ಧಭೂಮಿಯಲ್ಲಿ ವಿಜಯಶಾಲಿಗಳು ಗೆದ್ದಿದ್ದಕ್ಕಿಂತ ಮಾನವಕುಲಕ್ಕೆ ಹೆಚ್ಚು ಉಪಯುಕ್ತವಾಗಿದೆ".

1896: ಕೆನಡಾದ ಯುಕಾನ್‌ನಲ್ಲಿರುವ ಬೊನಾನ್ಜಾ ಕ್ರೀಕ್‌ನಲ್ಲಿರುವ ಕ್ಲೋಂಡೈಕ್‌ನಲ್ಲಿ ಜಾರ್ಜ್ ಕಾರ್ಮ್ಯಾಕ್ ಅವರಿಂದ ಚಿನ್ನವು ಮೊದಲು ಪತ್ತೆಯಾಯಿತು.

1930: ಕೆನಡಾದ ಹ್ಯಾಮಿಲ್ಟನ್‌ನಲ್ಲಿ ಮೊದಲ ಬ್ರಿಟಿಷ್ ಸಾಮ್ರಾಜ್ಯ ಕ್ರೀಡಾಕೂಟ ಆರಂಭ.

1945: ಕೊನೆಯ ಚೀನೀ ಚಕ್ರವರ್ತಿ ಮತ್ತು ಜಪಾನಿನ ಕೈಗೊಂಬೆ ರಾಜ್ಯದ ಆಡಳಿತಗಾರ ಮಂಚುಕುಮೊ, ಪುಯಿ , ಜಪಾನ್‌ಗೆ ತಪ್ಪಿಸಿಕೊಳ್ಳಲು ವಿಮಾನ ಹತ್ತಲು ತಯಾರಿ ನಡೆಸುತ್ತಿದ್ದಾಗ ಸೋವಿಯತ್ ಪಡೆಗಳಿಂದ ಸೆರೆಹಿಡಿಯಲ್ಪಟ್ಟರು.

1946 ನೇರ ಕ್ರಿಯಾ ದಿನ: ಪಾಕಿಸ್ತಾನ ಪ್ರತ್ಯೇಕ ರಾಷ್ಟ್ರವಾಗಬೇಕೆ ಬೇಡವೇ ಎಂಬ ಬಗ್ಗೆ ಕಲ್ಕತ್ತಾದಲ್ಲಿ ಮುಸ್ಲಿಮರು ಮತ್ತು ಹಿಂದೂಗಳ ನಡುವೆ ವ್ಯಾಪಕ ಗಲಭೆಗಳು ಭುಗಿಲೆದ್ದವು, 4,000 ಕ್ಕೂ ಹೆಚ್ಚು ಜನರು ಸಾವನ್ನಪ್ಪಿದರು ಮತ್ತು 1,00,000 ಜನರು ನಿರಾಶ್ರಿತರಾದರು.

# ಅದೊಂದು ಬೇರೆಯದೇ ಅನುಭೂತಿ...6

**ಧನಂಜಯ ಜೀವಾಳ ಬಿ.ಕೆ.**

ಗ್ರಾಮಾಯಣ-48

ಊರುಬಗೆ, ಗುತ್ತಿಹಳ್ಳಿಯ ಮಾರ್ಗವಾಗಿ ದೇವರಮನೆ ಬೆಟ್ಟವನ್ನೇರಿದ ಪ್ರವಾಸಿ ತಂಡಕ್ಕೆ ಎದುರಾದದ್ದು ಅಲೆಗಳೋಪಾದಿಯ ನಿರಂತರವಾದ ಚಾರ್ಮಾಡಿ ಪರ್ವತಗಳ ಸಾಲು.

ನೂರಾರು ಮೈಲು ದೂರದಿಂದ ಕರಾವಳಿಯ ಕುಳಿರ್ಗಾಳಿ ನಿರಂತರವಾಗಿ ಗಾಳಿಗಂಡಿ ಮಾರ್ಗವಾಗಿ ರಭಸವಾಗಿ ತೂರಿಬಂದು ದೇವರಮನೆ ಬಳಿ ಜ್ಯುಮ್ಮನೆ ಆಗಸಕ್ಕೆ ಚಿಮ್ಮಿ ನಿರ್ಮಿಸುವ ವಿಶಿಷ್ಟ ಅನುಭೂತಿಯನ್ನು ಬೆಟ್ಟದ ತುದಿಯೇರಿ ಅನುಭವಿಸಿಯೇ ತಿಳಿಯಬೇಕು. ಕಣ್ಣೆದುರಿನ ಕಣಿವೆ, ಕಮರಿಗಳು ಇದ್ದಕ್ಕಿದ್ದಂತೆ ಅಂತರ್ಧಾನವಾಗುವುದು, ನೋಡನೋಡುತ್ತಿದ್ದಂತೆ ನಿರಭ್ರವಾಗಿ ಗೋಚರಿಸಿ ಶೋಲಾ ಕಾಡುಗಳ ದರ್ಶನ ಮಾಡಿಸುವ ಬಗೆ ರಮಣೀಯವಾದುದು. ತಲೆ ಎತ್ತಿದರೆ ಎಡಕ್ಕೆ ಒಲೆಕಲ್ಲುಗುಡ್ಡ, ಬಲಕ್ಕೆ ಕಾಟಿಹರ, ಮಧ್ಯದ ಕಣಿವೆ ನಡುವಿನ ಕಾರಿಕೂಲ್, ಅದರ ಬುಡದಲ್ಲಿರುವ ಅಡ್ಡಮನೇರಹಿತ್ಲು, ಹಿಂದಿರುಗಿ ನೋಡಿದರೆ ಬಾರಿಮಲೆ, ಅದರಾಚೆಯ ಬಾಂಜಾರ್‌ಮಲೆ ಇತ್ತ ತಿರುಗಿದರೆ ಅನಂತವಾಗಿ ಹರಡಿ ದಿಗಂತದಲ್ಲಿ ಶಿರಾಡಿಯೊಂದಿಗೆ ಲೀನವಾಗುವ ಭೈರಾಪುರ ಅರಣ್ಯ ಪ್ರದೇಶ.

ದೇವಾಲಯದ ಪಕ್ಕದ ಬಯಲಿನಲ್ಲಿ ಟೆಂಟುಗಳನ್ನು ಹೂಡಲು ರುದ್ರಮುನಿಯವರು ತಮ್ಮ ಶಿಷ್ಯಂದಿರನ್ನು ಹುರಿದುಂಬಿಸುತಿದ್ದರು. ಆರಾರು ಜನ ಮಲಗುವಂಥಾ ಆರು ಟೆಂಟುಗಳನ್ನು ಅಚ್ಚುಕಟ್ಟಾಗಿ ಹೂಡಿದ ಹುಡುಗರು, ಅಡುಗೆಯವರು ಸಿದ್ಧಪಡಿಸಿದ್ದ ಕಾಫಿಯನ್ನು ಸೊರ್‌ಸೊರಕ್ಕೆಂದು ಹೀರುತ್ತಾ ಗ್ಲೂಕೋಡೀ ಗರಿಗರಿ ಬಿಸ್ಕತ್ತುಗಳನ್ನು ಮುರುಕುತ್ತಿರುವ ಸಮಯದಲ್ಲೇ ಎಂಟ್ಹತ್ತುಜನ ಹುಡುಗಿಯರು ತಮ್ಮತಮ್ಮ ಲಗೇಜಿನೊಂದಿಗೆ ಮೂರು ಟೆಂಟುಗಳನ್ನು ಆಕ್ರಮಿಸಿಕೊಂಡೇಬಿಟ್ಟರು. ಹೋ..... ಎಂದು ಬೊಬ್ಬಿಟ್ಟ ಹುಡುಗರು ಅನ್ಯಾಯ ಅನ್ಯಾಯ...... ಎಂದು ಕೂಗಾಡತೊಡಗಿದರು. ಈ ಹಿಂದೆಯೇ ಯೋಜಿಸಿದಂತೆ ಹುಡುಗಿಯರೆಲ್ಲ ಬಸ್ಸಿನಲ್ಲೇ ನಿದ್ರಿಸುವುದು, ಹುಡುಗರು ಟೆಂಟುಗಳಲ್ಲಿ ಮಲಗುವುದು ಎಂಬ ನಿಯಮ ಮುರಿದುಹೋಗುತ್ತಿರುವುದನ್ನು ಕಂಡ ಹುಡುಗರು ಮುಖ್ಯೋಪಾಧ್ಯಾಯರ ಬಳಿ ದೂರು ಕೊಂಡೋಯ್ದರು. ಹುಡುಗಿಯರು ಟೆಂಟಿನಲ್ಲೇ ಮಲಗುವುದಾಗಿ ಧರಣಿ ಕುಳಿತರು. ನೇತೃತ್ವವನ್ನು ಸಾಕ್ಷಾತ್ ಕವಿತಾ ಮೇಡಮ್ಮೇ ವಹಿಸಿಕೊಂಡಮೇಲಂತೂ ಹುಡುಗರಿಗಿರಲೀ ರುದ್ರಮುನಿಯವರೂ ಸಹಾ ಏನೂ ಮಾಡಲಾಗದೇ ಅ ಮೂರೂ ಟೆಂಟುಗಳನ್ನು ಹುಡುಗಿಯರದ್ದೇ ಆಸ್ತಿ ಎಂದು ಘೋಷಿಸಿದರು. ತಾವು ತೂರಿಕೊಂಡು ವಶಪಡಿಸಿಕೊಂಡಿದ್ದ ಟೆಂಟುಗಳು ತಮ್ಮದೇ ಎಂದು ಅಧಿಕೃತವಾಗಿ ಘೋಷಣೆಯಾಗಿದೆ ಎಂದು ಒಳಗಿದ್ದ ಲಲನೆಯರಿಗೆ ತಿಳಿದಾಗಲಂತೂ ಆ ಟೆಂಟಿನೊಳಗಿಂದ ಯ್ಯೇ............. ಎಂಬ ವಿಜಯಘೋಷ ಬಹಳ ಹೊತ್ತಿನವರೆಗೂ ಕೇಳಿಸುತಿತ್ತು.



ಹೆಡ್ಮಾಸ್ಟ್ರು ಬಸ್ಸಿನಲ್ಲಿ ತಮ್ಮ ಸೀಟಿನಡಿಯೇ ಇಟ್ಟುಕೊಂಡು ಜೋಪಾನವಾಗಿ ತಂದಿದ್ದ ಎರಡು ಗ್ಯಾಸ್‌ಲೈಟುಗಳಿನ್ನು ತಾವೇ ಇಳಿಸಿ ತಂದು, ಅಳವಡಿಸಿದ್ದ ಪಟ್ಟಿಪಟ್ಟಿ ಗಾಜಿನ ಆವರಣಗಳನ್ನು ತೆಗೆದು, ಗ್ಯಾಸ್ ಲೈಟಿಗೆ ಮ್ಯಾಂಟಲುಗಳನ್ನು ಅಳವಡಿಸುತಿದ್ದರು. ಸುತ್ತಲೂ ನಿಂತಿದ್ದ ವಿದ್ಯಾರ್ಥಿಗಳು ಯಾವುದೋ ಅಭೂತಪೂರ್ವ ವೈಜ್ಞಾನಿಕ ಆಪರೇಷನ್ ಒಂದು ನಡೆಯುತ್ತಿದೆಯೇನೋ ಎಂಬಂತೆ ಕಣ್ಣೆವೆಯಿಕ್ಕದೇ ನೋಡುತಿದ್ದರು. ಠಕ್ಕ ಠಕ್ಕ ಠಕ್ಕ ಠಕ್ಕ ಎಂದು ಪಂಪ್ ಹೊಡೆದು, ನಿಧಾನವಾಗಿ ಸೀಮೇಎಣ್ಣೆಯನ್ನು ಮ್ಯಾಂಟಲೆಡೆಗೆ ಹಾರಿಸಿ, ಅದನ್ನು ನೆನೆಸಿದರು.

ಬೆಂಕಿಕಡ್ಡಿ ಗೀರಿದವರೇ ಆ ಮ್ಯಾಂಟಲಿಗೆ ತಾಗಿಸಿದರೋ ಇಲ್ಲಮೋ ಅಷ್ಟರಲ್ಲಿ ಭಗ್ಗನೆ ಹತ್ತಿಕೊಂಡ ಬೆಂಕಿ ಮೂರ್ನಾಲ್ಕು ಅಡಿ ಎತ್ತರದವರೆಗೆ ಧಗಧಗನೆ ಉರಿಯತೊಡಗಿತು. ಟ್ಯಾಂಕಿನಲ್ಲಿ ತುಂಬಿಸಿದ್ದ ಗಾಳಿಯನ್ನು ನಿಧಾನವಾಗಿ ಹೊರಬಿಟ್ಟು, ಉರಿಯುತಿದ್ದ ಬೆಂಕಿಯ ಭರಾಸನ್ನು ಕಡಿಮೆಗೊಳಿಸಿದ ನಂತರ ಆ ಮ್ಯಾಂಟಲು ಕೆಂಬಣ್ಣಕ್ಕೆ ತಿರುಗಲಾರಂಭಿಸಿತು. ಮತ್ತೆ ಬಿರಡೆಯನ್ನು ಬಿಗಿ ಮಾಡಿ ಠಕ್ಕ ಠಕ್ಕ ಠಕ್ಕ ಠಕ್ಕ ಎಂದು ಪಂಪ್ ಹೊಡೆದು ಬರ್ಝ್ ಎಂಬ ಸದ್ದು ಬರುವಂತೆ ಮಾಡಿ ಆ ಕೆಂಬೆಳಕನ್ನು ಬಿಳಿಹಳದಿ ಬಣ್ಣಕ್ಕೆ ತಿರುಗುವಂತೆ ಫೈನ್ ಟ್ಯೂನ್ ಮಾಡಿದ ಹೆಡ್ಮಾಸ್ಟ್ರ ಮುಖದಲ್ಲಿ ಯುದ್ಧ ಗೆದ್ದ ಹೆಮ್ಮೆಯಿತ್ತು. ಒಂದು ಗ್ಯಾಸ್ ಲೈಟನ್ನು ಅಡುಗೆ ಮಾಡುವಲ್ಲಿಗೂ ಮತ್ತೊಂದನ್ನು ಟೆಂಟುಗಳು ಹಾಗೂ ಬಸ್ ನಿಂತಿದ್ದ ಜಾಗಕ್ಕೂ ನಡುವೆ ಇರಿಸಿ ಆ ಲೈಟಿನ ಸುತ್ತಲೂ ಎಲ್ಲರೂ ವೃತ್ತಾಕಾರವಾಗಿ ಕುಳಿತರು. ಹತ್ತಾರು ಹುಡುಗರು ಸೇರಿ ಸುತ್ತಮುತ್ತಲೂ ಇದ್ದ ಮರಗಳಿಂದ ಉದುರಿ ಬಿದ್ದಿದ್ದ ದರಗೆಲೆ, ಸಣ್ಣ ಗಾತ್ರದ ಗೆಲ್ಲು, ಕೊನೆಗಳನ್ನು ಒಟ್ಟುಮಾಡಿ ಆಳೆತ್ತರದ ಜ್ವಾಲೆ ಏಳುವಂತೆ ಕ್ಯಾಂಪ್ ಫೈರೊಂದನ್ನು ಸ್ಥಾಪಿಸಿಯೇಬಿಟ್ಟರು.

ಹೆಡ್ಮಾಷ್ಟ್ರನೂವೆ ಮೋಹನ್ರಾಜೂನೂವೇ ಈ ಗುಂಪಿನಿಂದ ಸ್ವಲ್ಪ ಬೇರೆಯಾಗಿ ಚಿಕ್ಕದೊಂದು ಟಾರ್ಚನ್ನು ಹಿಡಿದುಕೊಂಡು ಗುಟ್ಟುಗುಟ್ಟಾಗಿ ಮಾತನಾಡುತ್ತಾ ಬಯಲಲ್ಲಿ ಹಾಕಿದ್ದ ಟೆಂಟಿನ ಹಿಂಭಾಗಕ್ಕೆ ಹೋದರು. ಅವರ ಹಿಂದೆಯೇ ಚಿಕ್ಕದೊಂದು ಕವರಿನಲಿ ರೌಂಡ್‌ರೌಂಡಾಗಿ ಚಕ್ರದಂತೆ ಕೊಯ್ದಿದ್ದ ಸೌತೇಕಾಯಿ, ಉದ್ದುದ್ದಕ್ಕೆ ಕೊಯ್ದಿದ್ದ ಕ್ಯಾರೆಟ್ ಪೀಸುಗಳು ಹಾಗೂ ಹೆಳ್ಳೀಕಾಯಿ ಉಪ್ಪಿನಕಾಯಿಯೊಂದಿಗೆ ಪುಳುಕ್ಕನೆ ಸೇರಿಕೊಂಡವ ಅಡುಗೆ ಮಾಡಿಕೊಡಲು ಬಂದಿದ್ದ ಸುಬ್ರಮಣಿ.

ಹೆಡ್ಮಾಷ್ಟ್ರಿಗೆ ಇದೆಲ್ಲಾ ಯಾವಾಗ ಅಭ್ಯಾಸ ಆಯ್ತೆಂಬ ಸುಬ್ರಮಣಿಯ ಪ್ರಶ್ನೆಗೆ ದೇಶಾವರಿ ನಗೆ ನಕ್ಕ ಹೆಡ್ ಮಾಷ್ಟ್ರು ''ನನಗಾಗತಾನೇ ಕೆಲಸ ಸಿಕ್ಕಿತ್ತು. ಗೆಳೆಯರೆಲ್ಲಾ ಪಾರ್ಟಿ ಕೇಳ್ತಿದ್ರು. ಸರೀ; ಕೋಳೀ, ಮೀನು, ಪೋರ್ಕು, ಮಟನ್ನು, ಸ್ಯಾವಿಗೆ, ಕಡುಬು ಎಲ್ಲಾ ರೆಡೀ ಮಾಡಿಸಿ, ನಾನು ನಡೆಸ್ತಿದ್ದ ಟ್ಯುಟೋರಿಯಲ್ಲೇ ಊಟಕ್ಕೆ ಸಿದ್ಧತೆ ಮಾಡಿಸಿದೆ. ಕಳ್ನನ್ಮಕ್ಳು, ಎಣ್ಣೇ ಬೇಕೇಬೇಕು ಅಂತ ತಗಾದೆ ಶುರು ಮಾಡೋದೇ? ನನಗೆ ನೋಡಿದ್ರೆ ಕುಡಿದೇ ಗೊತ್ತಿಲ್ಲ.

ಮೂರು ಬೀರು ತರಲು ದುಡ್ಡು ಕೊಟ್ಟು, ಯಾರಿಗೂ ಕಾಣದಂತೆ, ಕಳ್ಳಸಾಗಣೆಯ ಸೀಕ್ರೆಟ್ ಮೈಂಟೇನ್ ಮಾಡುವಂತೆ ಮನವಿಮಾಡಿಕೊಂಡೆ.

ಟೈಟಾಗದಂತೆ ಕುಡಿರೋ ಮಾರಾಯ್ರ ಎಂದು ಬೇಡಿಕೊಂಡೆ. ಈ ಹಾರ್ಡ್ ಡ್ರಿಂಕ್ಸಿಗೂ, ಬೀರಿಗೂ ಇರೋ ವ್ಯತ್ಯಾಸ ನನಗೆ ಗೊತ್ತಿರ್ಲಿಲ್ಲ. ತರೋದಿಕ್ಕೆ ಹೋದವರಿಬ್ಬರೂ ಮೂರೂ ಬಾಟಲಿ ಖಾಲಿಮಾಡಿ, ''ನನ್ಮಗ್ನೇ ನಾವ್ ಇಷ್ಟ್‌ಜನಾ ಇದೀವಿ, ಮೂರ್ಬಾಟ್ಲಿ ಕೊಟ್ಟು, ಟೈಟಾಗ್ಬೇಡಿ ಅಂತಾ ಹೇಳ್ತೀಯಾ'' ಎಂದು ಉಗಿದು ಉಪ್ಪಿನ್ಕಾಯಿ ಹಾಕಿ, ಅವರವರೇ ಮೂರ್ಕೇಸು ಬೀರ್ತಂದು, ಅರ್ಧಾ ಗಂಟೇಲಿ ಮುಗಿಸಿಬಿಟ್ಟಿದ್ರು. ಇವರಿಗೆ ಸಾಧ್ಯ ಆಗಿರೋದು ನನಗೇಕೆ ಸಾಧ್ಯ ಇಲ್ಲ ಅಂದುಕೊಂಡು ನಾನೂ ಟ್ರೈ ಮಾಡಕ್ಕೆ ಶುರೂ ಮಾಡಿದೆ. ಹ್ಹೆ ಹ್ಹೆ'' ಎಂದರು.

ಡೂಮಿರೆಗೆಯಿಂದ ಹೊರಡುವಾಗಲೇ ವರದಶೆಟ್ಟಿಯ ಪುರಿಬೋಂಡ ಅಂಗಡಿಯಲ್ಲಿ ಕಟ್ಟಿಸಿಕೊಂಡಿದ್ದ ಇಪ್ಪತ್ತು ಲೀಟರ್ ಪುರಿ, ಅರ್ಧ ಕೇಜಿ ಖಾರಾಕಡ್ಡಿ, ಅರ್ಧ ಲೀಟರ್ ಹುಗ್ಗಲ್ಲೆಯನ್ನು ಹೊರತೆಗೆದು, ಅನ್ನ ಬಸಿಯಲೆಂದು ತಂದಿದ್ದ ಬಿದಿರಿನ ದೊಡ್ಡ ಬಗ್ಗುಕ್ಕೆಗೆ ಸುರುವಿ, ಎರಡೂ ಕೈಗಳ ಹತ್ತೂ ಬೆರಳುಗಳನ್ನು ಅಗಲವಾಗಿ ಹರಡಿಕೊಂಡು ಚೆನ್ನಾಗಿ ಮಿಕ್ಸ್ ಮಾಡಿದ ದ್ಯಾವಣ್ಣಗೌಡ ಮೇಷ್ಟ್ರು ಹುಡುಗರ ಬಳಿ ನೀಡಿ ಎಲ್ಲರಿಗೂ ಬೊಗಸೆ ತುಂಬ ಹಂಚಲು ಹೇಳಿದರು. ಉತ್ಸಾಹದಿಂದ ಜಿಟಜಿಟನೆ ಉರಿಯುತ್ತಿದ್ದ ಬೆಂಕಿಗೆ ಸಮ್ಮೋಹಿತರಾಗಿ ಸುತ್ತಲಿನ ಕಾಡಿನ ಮೂಲೆಮೂಲೆಯಲ್ಲಿ ಹಾರಾಡುತಿದ್ದ ಕ್ರಿಮಿಕೀಟಗಳು ಕರೆಯದೇ ಬಂದು ಆ ಕೆನ್ನಾಲಿಗೆಗೆ ಸಿಲುಕಿ ಸಹಗಮನ ಮಾಡುತಿದ್ದವು. ಗರಿಗರಿಯಾಗಿದ್ದ ಪುರಿಯನ್ನು ಬಾಯಿಗೆಸೆದುಕೊಳ್ಳುತಿದ್ದ ದಿನೇಶ ಇದ್ದಕ್ಕಿದ್ದಲೇ ಶ್ವಾಸಕೋಶವೇ ಕಿತ್ತುಬರುವಂತೆ ಕೆಮ್ಮತೊಡಗಿದ. ಎಸೆದುಕೊಂಡ ಪುರಿಕಡ್ಲೆಯನ್ನು ಕ್ಯಾಚ್ ಹಿಡಿಯಲು ತೆರೆದು ಬೀಸಿದ ಬಾಯಿಯೊಳಕ್ಕೆ ತಾನೇನು ಕಡಿಮೆ ಎಂಬಂತೆ ನುಸುಳಿಕೊಂಡ ಕೀಟವೊಂದು ತನ್ನ ಅಪೂರ್ವ ಸ್ವಾದದೊಂದಿಗೆ ದಿನೇಶನ ಗಂಟಲಲ್ಲಿ ಕೋಲಾಹಲವನ್ನೇ ಹುಟ್ಟುಹಾಕಿತ್ತು. ಗಂಟಲೊಳಗೆ ಕೀಟ ನುಗ್ಗಿಸಿಕೊಂಡು ಕೆಮ್ಮಿ, ಕ್ಯಾಕರಿಸಿ ಕಕ್ಕಾಬಿಕ್ಕಿಯಾಗಿದ್ದ ದಿನೇಶ ಒಂದು ತಹಬಂದಿಗೆ ಬರುವಷ್ಟರಲ್ಲಿ ಆತನ ಕಣ್ಣುಗುಡ್ಡೆಗಳು ಕಪ್ಪೆಕಣ್ಣುಗಳಾಗಿ ರೂಪಾಂತರಹೊಂದಿದ್ದವು.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248